# ಚಿಪ್ಪು ಅರಳಿ ನವಿಲ ನರ್ತನ



ಶೋಕೆಸಿನಲ್ಲಿದ್ದ ಕೆಲವು ವಸ್ತುಗಳನ್ನು ಸ್ವಚ್ಛಗೊಳಿಸುತ್ತಿದ್ದಾಗ ಈ ಸುಂದರ ನವಿಲಿನ ಕಡೆಗೆ ಗಮನ ಹೋಯಿತು. ಸುಮಾರು ಮೂರು ದಶಕಗಳ ಹಿಂದೆ ಪ್ರವಾಸ ಹೋಗಿದ್ದಾಗ ರಾಮೇಶ್ವರಂನಲ್ಲಿ ಕೊಂಡು ತಂದ ಕಲಾಕೃತಿಯಿದು. ಸ್ಥಳೀಯ ಪ್ರತಿಭಾವಂತ ಕಲಾವಿದರು ಸಮುದ್ರ ತೀರದಲ್ಲಿ ಸಿಗುವ ವಸ್ತುಗಳನ್ನು ಉಪಯೋಗಿಸಿ ಸುಂದರ ಕಲಾಕೃತಿಗಳನ್ನು ತಯಾರಿಸಿ ಮಾರಾಟ ಮಾಡುತ್ತಾರೆ. ವಿವಿಧ ಆಕಾರ, ಗಾತ್ರಗಳ ಶಂಖ ಮತ್ತು ಕಪ್ಪೆಚಿಪ್ಪುಗಳನ್ನು ಜೋಡಿಸಿ, ಅದಕ್ಕೆ ಸೂಕ್ತ ಬಣ್ಣ ಬಳಿದು ಎಷ್ಟು ಸುಂದರವಾಗಿ ಈ ನವಿಲನ್ನು ಮಾಡಿದ್ದಾರೆ ನೋಡಿ.

ಇಂತಹ ಅನೇಕ ಬಗೆಯ ವಸ್ತುಗಳು ಅಲ್ಲಿನ ಸಮುದ್ರ ತೀರದ ಅಂಗಡಿಗಳಲ್ಲಿ ದೊರೆಯುತ್ತವೆ. ಕೊಂಡು ತಂದರೆ ಮನೆಯ ಅಲಂಕಾರದ ಜತೆಗೆ ಪ್ರವಾಸದ ನೆನಪೂ ಸಹಾ ತಾಜಾ ಆಗಿರುತ್ತದೆ ಅಲ್ಲವೇ?

—ಬಿ.ಎಸ್. ರಾಜಲಕ್ಷ್ಮಿ ಹಾಸನ




# ಹುಟ್ಟಹಬ್ಬದ ಸಾರ್ಥಕ ಕಾಯಕ

ಸಾಗರದ ಜುವೆಲರ್ಸ್ ಒಂದರಲ್ಲಿ ಕೆಲಸ ಮಾಡುತ್ತಿರುವ ಸಂತೋಷ್ ಅಣ್ವೇಕರ್ ತಮ್ಮ ಜನ್ಮದಿನದ ಅಂಗವಾಗಿ 5 ದಿನಗಳ ಕಾಲ (ಏಪ್ರಿಲ್ 4 ರಿಂದ ಏಪ್ರಿಲ್ 8ರ ವರೆಗೆ) ಸಾಗರದ ಬೀದಿ ಬೀದಿಗಳಲ್ಲಿ ಸೈಕಲ್‌ನಲ್ಲಿ ಸುತ್ತಿ ಕಸವನ್ನು ಆಯ್ದು ಅದರ ವಿಲೇವಾರಿ ಮಾಡಿ ನಗರದ ಸ್ವಚ್ಛತೆಗೆ ಸೇವೆ ಸಲ್ಲಿಸಿದ್ದಾರೆ. ರಾಷ್ಟ್ರೀಯ ಹಬ್ಬಗಳಲ್ಲಿಯೂ ತಮ್ಮ ಸೈಕಲಿಗೆ ಭಿತ್ತಿಪತ್ರ ಅಂಟಿಸಿ ಸಂಚರಿಸುತ್ತಾ ಊರಲೆಲ್ಲಾ ಸಿಹಿ ಹಂಚುತ್ತಾರೆ.

—ಅಂಜನ್ ಕಾಯ್ಕಿಣಿ, ಸಾಗರ

# ಇದು ಬರ್ಕ

ಒಂದು ಕಾಲದಲ್ಲಿ ಪಶ್ಚಿಮ ಘಟ್ಟದ ಅರಣ್ಯಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದ ಈ ಪುಟ್ಟ ಜಿಂಕೆಯನ್ನು ಬರ್ಕ ಎಂದು ಕರೆಯುತ್ತಾರೆ. ಗೊರಸು ಇರುವ ಸಸ್ತನಿಗಳಲ್ಲಿ ಇದಕ್ಕಿಂತ ಚಿಕ್ಕದು ಇನ್ನೊಂದು ಇಲ್ಲ. ಒಂದಡಿಗಿಂತ ಸ್ವಲ್ಪ ಎತ್ತರ, ಅಷ್ಟೇ ಉದ್ದವಿರುತ್ತದೆ. ಟ್ರ್ಯಾಗುಲಿಡೇ ಕುಟುಂಬಕ್ಕೆ ಇದು ಸೇರಿದೆ. ಏಳೆಂಟು ಕಿಲೊ ಭಾರವಿರುತ್ತದೆ. ಸಾಕಿಕೊಂಡರೆ ಮನೆಯಲ್ಲಿ ಬಂಧನವಿಲ್ಲದೆ ಉಳಿಯುತ್ತದೆ. ಮಾಂಸಕ್ಕಾಗಿ ಸತತ ಬೇಟೆಯ ಫಲವಾಗಿ ಅದರ ಸಂಖ್ಯೆ ಕ್ಷೀಣಿಸುತ್ತಿದೆ.

—ಪ. ರಾಮಕೃಷ್ಣಶಾಸ್ತ್ರಿ

